

## ಶಾಹಿದ್‌ರತ್ತ ಸೋನಾಕ್ಷಿ ಪ್ರೀತಿಯ ಹರಿವು

'ದಬಾಂಗ್' ಬೆಡಗಿ ಸೋನಾಕ್ಷಿ ಸಿನ್ಹಾ ಮೊನ್ನೆ ಮೊನ್ನೆ 27ರ ಹರೆಯಕ್ಕೆ ಕಾಲಿರಿಸಿದ್ದಾರೆ. ಜನ್ಮದಿನಾಚರಣೆಯ ಸಂಭ್ರಮವನ್ನು ಸೋನಾಕ್ಷಿ ಜೋರಾಗಿಯೇ ಆಚರಿಸಿಕೊಂಡಿದ್ದಾರೆ. ಸಿದ್ಧಾರ್ಥ್ ಮಲ್ಹೋತ್ರಾ, ಅರ್ಜುನ್ ಕಪೂರ್, ವಿಕ್ರಮಾದಿತ್ಯ ಮೋಟ್ವಾನೆ ಸೇರಿದಂತೆ ಸೋನಾಕ್ಷಿಯ ಆಪ್ತೇಷ್ಟರು, ಬಂಧು ಬಳಗದವರು ಆ ಸಂಭ್ರಮದಲ್ಲಿ ಪಾಲ್ಗೊಂಡಿದ್ದರು. ಅಲ್ಲದೆ ಹಿಂದಿನ ದಿನವೇ ಸೋನಾಕ್ಷಿ ತಮ್ಮ 'ಹಾಲಿಡೇ' ಚಿತ್ರದ ಸಹನಟ ಅಕ್ಷಯ್ ಕುಮಾರ್ ಅವರ ಜೊತೆ ಕೇಕ್ ಕತ್ತರಿಸಿಯೂ ಸಂಭ್ರಮಾಚರಿಸಿದ್ದರು.

ಹೀಗೆ ಒಂದು ದಿನ ಮುಂಚಿತವಾಗಿಯೇ ಶುರುವಾಗಿದ್ದ ಆಕೆಯ ಜನ್ಮದಿನದ ಆಚರಣೆ ಅಷ್ಟಕ್ಕೇ ಮುಗಿಯಲಿಲ್ಲ. ಅದು ಇನ್ನೂ ಮುಂದು–ವರಿದಿತ್ತು ಎನ್ನುವುದು ಬಿ–ಟೌನಿನಲ್ಲಿ ಹೊಸದಾಗಿ ಕೇಳಿಬರುತ್ತಿರುವ ಗುಸುಗುಸು. ಅಂದ ಹಾಗೆ, ಆಕೆ ಈ ಹೆಚ್ಚುವರಿ ಸಮಯ ಮೀಸಲಿಟ್ಟಿದ್ದು ಬೇರಾರಿಗೂ ಅಲ್ಲ, 'ಆರ್ ರಾಜ್‌ಕುಮಾರ್' ಚಿತ್ರದ ಹೀರೊ ಶಾಹಿದ್ ಕಪೂರ್‌ಗಾಗಿ. 'ಆರ್ ರಾಜ್‌ಕುಮಾರ್' ಚಿತ್ರೀಕರಣದ ವೇಳೆ ಸೋನಾಕ್ಷಿ ಮತ್ತು ಶಾಹಿದ್ ನಡುವೆ ಪ್ರೇಮ ಅರಳಿದೆ ಎಂಬ ಸಣ್ಣ ಗಾಳಿ ಸುದ್ದಿ ಹರಿದಾಡುತ್ತಿತ್ತು. ಅದೀಗ ದಟ್ಟವಾಗಲು ಕಾರಣ ಸೋನಾಕ್ಷಿ ಪ್ರತ್ಯೇಕವಾಗಿ ಶಾಹಿದ್ ಜೊತೆ ಜನ್ಮದಿನ ಆಚರಿಸಿದ್ದು.

ಹೊಸ ಪ್ರೇಯಸಿಯ ಜನ್ಮದಿನವನ್ನು ನೆನಪಿನಲ್ಲಿ ಉಳಿಯುವಂತೆ ಮಾಡಲು ಶಾಹಿದ್ ನೇರವಾಗಿ ಪಾರ್ಟಿ ಹಾಲ್‌ನಿಂದ ಆಕೆಯನ್ನು ಕರೆದುಕೊಂಡು ಕಾರ್‌ನಲ್ಲಿ ಲಾಂಗ್‌ಡ್ರೈವ್ ಹೋಗಿದ್ದರಂತೆ. ಸಂತೋಷಕೂಟದಲ್ಲಿ ಪಾಲ್ಗೊಂಡಿದ್ದ ಗಣ್ಯರೆಲ್ಲರೂ ಕ್ಯಾಮೆರಾ ಕಣ್ಣಿನಲ್ಲಿ ಸೆರೆಯಾಗಿದ್ದರೂ ಶಾಹಿದ್ ಕಾಣಿಸಿಕೊಂಡಿರಲಿಲ್ಲ. ಪಾರ್ಟಿ ನಡೆಯುತ್ತಿದ್ದ ಜಾಗಕ್ಕೆ ಶಾಹಿದ್ ತಡವಾಗಿ ಬಂದರಂತೆ.

## ಶ್ರುತಿ- ರೈನಾ ಜತೆಯಾಟ!



ಅನೂಷ್ಕಾ ಶರ್ಮಾ ಮತ್ತು ವಿರಾಟ್ ಕೊಹ್ಲಿಯ ಪ್ರೇಮ ಪ್ರಸಂಗ ಬಿ–ಟೌನಿನಲ್ಲಿ ಇನ್ನೂ ತಾಜಾ. ಈಗ ಬಿ– ಟೌನ್ ಕ್ರಿಕೆಟ್‌ನ ಮತ್ತೊಂದು ಪ್ರೇಮ್‌ಕಹಾನಿ ಶುರುವಾಗಿದೆ. ಐಪಿಎಲ್‌ನ ಆರಂಭದ ಪಂದ್ಯಗಳಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಸುರೇಶ್ ರೈನಾ ಹೇಳಿಕೊಳ್ಳುವಂತ ಆಟವೇನೂ ಪ್ರದರ್ಶಿಸಿರಲಿಲ್ಲ. ಆದರೆ ಕೊನೆಯ ಪಂದ್ಯದಲ್ಲಿ ರೈನಾ ಬ್ಯಾಟಿಂಗ್ ಅಬ್ಬರ ಕಂಡು ಬೆರಗಾಗದವರಿಲ್ಲ. ಹೀಗೆ ರೈನಾ ಇದ್ದಕ್ಕಿದ್ದಂತೆ ಅಬ್ಬರಿಸಲು ಕಾರಣ ಶ್ರುತಿ ಹಾಸನ್ ಅಂತೆ!

ಮೈದಾನದಲ್ಲಿ ಬ್ಯಾಟಿಂಗ್ ಮುಗಿಸಿದ ಬಳಿಕ ಹೊರಗೆ ಶ್ರುತಿ ಜೊತೆ ಡೇಟಿಂಗ್ ನಡೆಸುತ್ತಿದ್ದಾರೆ ರೈನಾ. ಇಬ್ಬರೂ ಈ ಸಂಬಂಧವನ್ನು ಗಂಭೀರವಾಗಿ ಸ್ವೀಕರಿಸಿದ್ದಾರೆ ಎನ್ನುತ್ತಿದೆ ಬಲ್ಲ ಮೂಲಗಳು. ಆದರೆ ಇಬ್ಬರೂ ಇದನ್ನು ಬಹಿರಂಗವಾಗಿ ಒಪ್ಪಿಕೊಳ್ಳುತ್ತಿಲ್ಲ. ಕಳೆದ ವರ್ಷ ಶ್ರುತಿ ಐಪಿಎಲ್ ಪಂದ್ಯಾವಳಿಗಳಲ್ಲಿ ಚೆನ್ನೈ ತಂಡವನ್ನು ಹುರುದುಂಬಿಸಲು ಕ್ರೀಡಾಂಗಣಗಳಲ್ಲಿ ಕಾಣಿಸಿ–ಕೊಳ್ಳುತ್ತಿದ್ದರು. ಆದರೆ ಈ ಬಾರಿ ಶ್ರುತಿ ಸಿನಿಮಾ–ಗಳಲ್ಲಿ ಬಿಜಿಯಿದ್ದ ಕಾರಣ ಅತ್ತ ಸುಳಿದಿಲ್ಲ. ರೈನಾ ಆಕೆಯನ್ನು ಅದೃಷ್ಟದೇವತೆ ಎಂದೇ ಪರಿಗಣಿಸಿದ್ದಾರಂತೆ. ಶ್ರುತಿ ಹಾಜರಿದ್ದರೆ ಚೆನ್ನಾಗಿ ಆಡುತ್ತೇನೆ, ತಂಡವೂ ಗೆಲ್ಲುತ್ತದೆ ಎಂಬ ನಂಬಿಕೆ ರೈನಾರಲ್ಲಿದೆ.

ಇಬ್ಬರ ನಡುವೆ ಪ್ರೀತಿ ಇದೆ ಎಂಬುದನ್ನು ಶ್ರುತಿ ಅಲ್ಲಗಳೆಯುತ್ತಾರೆ. 'ರೈನಾ ಜೊತೆ ಶ್ರುತಿ ಡೇಟಿಂಗ್ ಸುಳ್ಳು ಸುದ್ದಿ. ಅದಕ್ಕೆ ಶ್ರುತಿ ಬಳಿ ಸಮಯವೂ ಇಲ್ಲ' ಎಂದು ಶ್ರುತಿಯ ವಕ್ತಾರೆ ತಿಳಿಸಿದ್ದಾರೆ. ರೈನಾ ಕೂಡ ಟ್ವಿಟ್ಟರ್‌ನಲ್ಲಿ 'ಈ ಬಗ್ಗೆ ಅತಿಯಾದ ವರದಿಗಳು ಮಾಧ್ಯಮಗಳಲ್ಲಿ ಪ್ರಕಟ–ವಾಗುತ್ತಿವೆ. ಎಲ್ಲರಿಗೂ ಸ್ಪಷ್ಟಪಡಿಸುತ್ತಿದ್ದೇನೆ, ನಾನು ಯಾರೊಂದಿಗೂ ಡೇಟಿಂಗ್ ನಡೆಸುತ್ತಿಲ್ಲ' ಎಂದು ಬರೆದಿದ್ದಾರೆ.

■ ಅಮಿ